ಶ್ರೀ ಎಂ. ರಾಮಪ್ಪ.—1984-85ರ ಸಾಲಿನದು ಎಷ್ಟು ಬಾಕಿ ಇದೆ ಎಂದು ಹೇಳಬಲ್ಲಿರಾ ?

ಶ್ರೀ ರಮೇಶ್ ಜಿಗಜಿಣಗಿ.—84-85ರ ಸಾಲಿನ ವಿವರ ಸಧ್ಯಕ್ಕೆ ನನ್ನ ಹತ್ತಿರ ಇಲ್ಲ. ಮಾನ್ಯ ಸದಸ್ಯರಿಗೆ ಅದನ್ನು ಒದಗಿಸಿಕೊಡುತ್ತೇನೆ.

ಶ್ರೀ ಎಂ. ರಾಮಪ್ಪ.—ಇದರಲ್ಲಿ ಒಂದು ಅಂಶ ಅಡಕವಾಗಿದೆ. ಇಷ್ಟೊಂದು ಸಾಲ ಇದೆ ಎಂದು ಇವತ್ತೇ ಮೊದಲನೇ ಬಾರಿಗೆ ಕೇಳುತ್ತಿದ್ದೇನೆ ಡಿಫಾಲ್ಟರ್ಸ್ ಆಗಿದ್ದವರಿಗೆ ಮತ್ತೆ ಕಂಟ್ರಾಕ್ಟ್ ಕೊಟ್ಟಿದ್ದೀರಿ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲವೇ ?

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಸದಸ್ಯರುಗಳಿಗೆ ಈ ವಿವರಣೆಯನ್ನು ಕಳುಹಿಸಿಕೊಡುತ್ತೇನೆ ಹಿಂದೆ ಯಾವುದೂ ಬಾಕಿ ಇರಲಿಲ್ಲ ಎಂದು ಅವರು ಹೇಳಿದರು. ಆದರೆ ಈ ಬಾಕಿ 1956ರಿಂದಲೂ ಉಳಿದುಕೊಂಡು ಬಂದಿದೆ ಆದರೆ ಎರಡು ವರ್ಷಗಳಿಂದಲೂ ಅಂದರೆ 83-84 ಮತ್ತು 84-85ರಲ್ಲಿ ಎಕ್ಸೈಸ್ ಕಂಟ್ರಾಕ್ಟ್‌ದಾರರಲ್ಲಿ ಸ್ಪರ್ಧೆ ಇತ್ತು. ಕಂಟ್ರಾಕ್ಟರ್ಸ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಗುತ್ತಿಗೆಯನ್ನು ತೆಗೆದುಕೊಂಡಿದ್ದರು, ಆದರೆ ಈಗ ನಮ್ಮಗಳಿಗೆ ಸ್ವಲ್ಪ ನಷ್ಟವಾಗಿರುವುದರಿಂದ ಕಾಲಾವಕಾಶ ಕೊಡಿ ಎಂದು ಕೇಳಿಕೊಳ್ಳುತ್ತಿದ್ದಾರೆ. ನಮ್ಮಗಳಿಗೆ ಬಾಕಿ ಬರಬೇಕಾಗಿರುವುದು ಇಪ್ಪತ್ತು ಕೋಟಿ ರೂಪಾಯಿಗಳು. ಆದರೆ ಅದರಲ್ಲಿ ಒಂಬತ್ತು ಕೋಟಿ ರೂಪಾಯಿ ಬ್ಯಾಂಕ್ ಬ್ಯಾಲೆನ್ಸ್‌ನಲ್ಲಿದೆ. ಎರಡು ಕೋಟಿ ರೂಪಾಯಿ ಆರ್.ಡಿ.ಯಲ್ಲಿದೆ. ಒಟ್ಟು ಹದಿನೈದು ಕೋಟಿ ಬರಬೇಕಾಗಿದೆ. ಹೀಗೆ ಆ ಹಣವನ್ನು ವಸೂಲು ಮಾಡಲು ಪ್ರಯತ್ನ ಮಾಡುತ್ತಿದ್ದೇವೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಂ. ರಾಮಪ್ಪ.—ಇದರಲ್ಲಿ ಒಂದು ಗಂಭೀರವಾದ ವಿಷಯ ಅಡಕವಾಗಿದೆ. ಯಾರ್ಯಾರು ಎಷ್ಟು ಬಾಕಿ ಇಟ್ಟುಕೊಂಡಿದ್ದಾರೆ ಎಂಬ ಬಗ್ಗೆ ನಿಮ್ಮಲ್ಲಿ ಏನಾದರೂ ಮಾಹಿತಿ ಇದೆಯೇ ? ಆಥವಾ ಕೋರ್ಟ್ ಆರ್ಡರ್ಸ್ ಏನಾದರೂ ಇದೆಯೇ ?

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಸದಸ್ಯರು ಯಾರ್ಯಾರದು ಎಷ್ಟೆಷ್ಟು ಬಾಕಿ ಇದೆ ಎಂದು ಕೇಳುತ್ತಿದ್ದಾರೆ. ಅದು ಒಂದು ನಾಲ್ಕೈದು ಪುಟಗಳಷ್ಟು ಇದೆ. ಮಾನ್ಯ ಸದಸ್ಯರಿಗೆ ಅದನ್ನು ಈಗ ಕಳುಹಿಸಿಕೊಡುತ್ತಿದ್ದೇನೆ.

ಶ್ರೀ ಎಂ. ರಾಮಪ್ಪ.—ಡಿಫಾಲ್ಟರ್ಸ್ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ ? ಏತಕ್ಕಾಗಿ ಅವರ ಮೇಲೆ ಕ್ರಮ ಕೈಗೊಂಡಿಲ್ಲ. ಕಂಟ್ರಾಕ್ಟರ್ಸ್ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಸದಸ್ಯರ ಭಾವನೆ ಏನು ಇದೆ ಎಂದರೆ, ಮಂತ್ರಿಗಳಾಗಲೀ ಅಥವಾ ಸರ್ಕಾರವಾಗಲೀ ಈ ಗುತ್ತಿಗೆದಾರರ ಹತ್ತಿರ ಬಹಳ ಸಲಿಗೆಯಿಂದ ಇದ್ದಾರೆಂದು ತಿಳಿದುಕೊಂಡು ಅವರುಗಳಿಗೆ ಅವಕಾಶ ಮಾಡಿಕೊಡುತ್ತಿದ್ದಾರೆನ್ನುವ ಅವರ ಭಾವನೆಯನ್ನು ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ, ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ನಾನು ಗುತ್ತಿಗೆದಾರರ ಹತ್ತಿರ ಯಾವ ಸಲಿಗೆಯನ್ನು ಇಟ್ಟುಕೊಂಡಿಲ್ಲ. ಆದಕ್ಕೆ ನನ್ನ ಹತ್ತಿರ ಆವ ಕಾಶವೂ ಇಲ್ಲ ಎನ್ನುವ ಒಂದು ಮಾತನ್ನು ನಾನು ಹೇಳುತ್ತೇನೆ. 17ನೇ ತಾರೀಖಿನ ದಿವಸ ನನ್ನ ಇಲಾಖೆಯ ಅಧಿಕಾರಿಗಳ ಒಂದು ಸಭೆಯನ್ನು ಕರೆದಿದ್ದೆ. ಆದರಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಇಷ್ಟೆಷ್ಟಿದೆಯೋ ಅದನ್ನು ಗುತ್ತಿಗೆದಾರರಿಂದ ವಸೂಲು ಮಾಡಬೇಕು, ಇಲ್ಲದೇಹೋದರೆ ಸೆಪ್ಟೆಂಬರ್ ತಿಂಗಳಲ್ಲಿ ಮಾರು ಹರಾಜನ್ನು ಮಾಡಬೇಕಾಗುತ್ತದೆ ಎಂಬುದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ಮಾತನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ವಿಷಯ : ಕಾಪುವಿನಲ್ಲಿರುವ ಮಾರಿ ದೇವಸ್ಥಾನದ ಆದಾಯ.

ಪ್ರ. ಸಂಖ್ಯೆ 82 (155) ಶ್ರೀ ವಸಂತ ವಿ. ಸಾಲ್ಯಾನ (ಕಾಪು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕಾಪು ಹೊಸ ಮಾರಿಗುಡಿಗೆ ಸರ್ಕಾರಿ ಆಡಳಿತ ಅಧಿಕಾರಿಯನ್ನು ಮೇಲ್ವಿಚಾರಣೆಗಾಗಿ ನೇಮಿಸಿದ ನಂತರ 1985ನೇ ಇಸವಿ ಮಾರ್ಚ್ 27ರಿಂದ ಜುಲೈ 16ರ ತನಕ ಬಂದಿರುವ ಆದಾಯವೆಷ್ಟು ಹಾಗೂ ಆ ಹಣವನ್ನು ಯಾವ ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆ

ಆ) ಈ ಹಿಂದೆ 1974ರಿಂದ 1984ರ ಡಿಸೆಂಬರ್ ತನಕ ಆಡಳಿತ ನಿರ್ವಹಿಸಿದ ಸದಸ್ಯರ ಅವಧಿಯಲ್ಲಿ ಬಂದಿದ್ದ ಆದಾಯದೆಷ್ಟು, ಹಾಗೂ ಆ ಹಣವನ್ನು ಯಾವ ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆ.

ಮಾನ್ಯ ಕಂದಾಯ ಮಂತ್ರಿಗಳು ಉತ್ತರಿಸುವರು ;

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಆ) 1,67,640-33 ರೂಪಾಯಿಗಳು, ಖರ್ಚು ಕಳೆದು ಉಳಿದ 1,12,308 ರೂಪಾಯಿಗಳನ್ನು ಸಿಂಡಿಕೇಟ್ ಬ್ಯಾಂಕ್, ಕಾಪು ಅಕೌಂಟ್ಸ್ ನಂಬರು 18900ನಲ್ಲಿ ಠೇವಣಿ ಇಡಲಾಗಿದೆ.

ಆ) 17,91,283-64 ರೂಪಾಯಿಗಳು.

1) ಸಿಂಡಿಕೇಟ್ ಬ್ಯಾಂಕ್ ಕಾಪು
2) ವಿಜಯ ಬ್ಯಾಂಕ್ ಕಾಪು

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಸರ್ಕಾರ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ ನಂತರ ಮೂರು ತಿಂಗಳಲ್ಲಿ 1,67,640-00 ರೂ.ಗಳು ಸಂಗ್ರಹವಾಗಿ ಖರ್ಚಿಲ್ಲ ಕಳೆದು ಉಳಿದದ್ದು 1,12,308 ರೂ. ಆದೇ ರೀತಿಯಲ್ಲಿ 10 ವರ್ಷಗಳ ಕಾಲ ಆಡಳಿತ ಮಂಡಲಿ ಇದ್ದಾಗ 17,91,283-64 ರೂ.ಗಳಿತ್ತು. ಆದರೆ ಅದರಲ್ಲಿ ಖರ್ಚಾದದ್ದೆಷ್ಟು ? ಉಳಿದದ್ದೆಷ್ಟು ? ಮತ್ತು ಸಿಂಡಿಕೇಟ್ ಬ್ಯಾಂಕಿನಲ್ಲಿ ಎಷ್ಟು, ವಿಜಯಾ ಬ್ಯಾಂಕಿನಲ್ಲಿ ಎಷ್ಟು ಇಡಲಾಯಿತು ಎಂಬುದನ್ನು ಮಂತ್ರಿಗಳು ಹೇಳಲಿಲ್ಲ. ಆಮೇಲೆ, ಮಂಗಳವಾರದ ಪೂಜೆ ಈಗ ನಡೆಯುತ್ತಿದೆ. ಅದರಿಂದ ಬರುವ ಆದಾಯ ಎಷ್ಟು ? ಇದನ್ನು ಯಾವ ಬ್ಯಾಂಕಿಗೆ ರೆಮಿಟ್ ಮಾಡುತ್ತಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ದಯವಿಟ್ಟು ಉತ್ತರ ನೋಡಲಿ. ಮಾನ್ಯ ಸದಸ್ಯರು ಹೋದ ಸದನದಲ್ಲಿ ಒಂದು ವಿಚಾರ ಹೇಳಿ ಅಲ್ಲಿನ ಅವ್ಯವಹಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದರು. ನಾನು ಅದರ ಬಗ್ಗೆ ಆಜ್ಞೆ ಹೊರಡಿಸಿ ತನಿಖೆ ಮಾಡಿಸುತ್ತಿದ್ದೇನೆ.

ಶ್ರೀ ವಸಂತ ವಿ. ಸಾಲಿಯಾನ್—ನನಗೆ ಸಂಪೂರ್ಣ ಉತ್ತರ ಸಿಗಲಿಲ್ಲ. ಈಗ 17,91,283-64 ಜಮಾ ಆಗಿದ್ದರೆ, ಖರ್ಚು ಎಷ್ಟಾಗಿತ್ತು ? ಯಾವ ಬ್ಯಾಂಕಿನಲ್ಲಿ ಠೇವಣಿ ಎಷ್ಟು ಇಡಲಾಗಿತ್ತು ಎಂಬುದನ್ನು ಹೇಳದೆ ತಪ್ಪಿಸಿಕೊಳ್ಳುತ್ತಿದ್ದಾರೆ. ಮಂತ್ರಿಗಳು ಇದರಲ್ಲಿ ಶಾಮೀಲಾಗಿದ್ದಾರೆಂದು ನನ್ನ ಅನುಮಾನ ಮತ್ತು ಮೊನ್ನೆ ಆಡಳಿತಾಧಿಕಾರಿ 17,000 ರೂ.ಗಳ ಪತ್ರಿಕಾ ಹೇಳಿಕೆ ನೀಡಿ ಖರ್ಚುಮಾಡಿದ್ದಾರೆ. ಇದನ್ನು ಅವರು ಹೇಗೆ ಮಾಡಿದರು ? ಇದಕ್ಕೆ ಮಂತ್ರಿಗಳ ಉತ್ತರ ಬರಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧಿಕಾರಿಗಳೇ ಆಗಲಿ, ಯಾವನೇ ಆಗಲಿ ನನ್ನ ದೃಷ್ಟಿಯಲ್ಲಿ ಹಾಗೆ ಕೊಡುವುದು ತಪ್ಪು. ದೇವಸ್ಥಾನದ ಆದಾಯದ ಹಣದಿಂದ ಈ ರೀತಿ ನಡೆಸಿದ್ದರೆ ವಿಚಾರಣೆ ಮಾಡಿಸುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ.—ನನಗೆ ಉತ್ತರ ಬರಲೇ ಇಲ್ಲ. 17,91,283-64 ರೂ.ಗಳಲ್ಲಿ ಸಿಂಡಿಕೇಟ್ ಮತ್ತು ವಿಜಯಾ ಬ್ಯಾಂಕ್‌ಗಳಲ್ಲಿ ಎಷ್ಟೆಷ್ಟು ಠೇವಣಿ ಇಡಲಾಗಿತ್ತು ?

ಶ್ರೀ ಎಸ್. ಆರ್. ಬೊಮ್ಮಾಯಿ.—ವಿವರ ನನಗೆ ಗೊತ್ತಿಲ್ಲ.

ಶ್ರೀ ಸಾಲಿಯಾನ.—ನನಗೆ ವಿವರ ಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಗಲಿ, ತರಿಸಿಕೊಡುತ್ತೇನೆ.

ವಿಷಯ ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖೋಟಾ ಅಧಿಕಾರ ಪತ್ರ

ಪ್ರ. ಸಂಖ್ಯೆ 82 (209) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖೋಟಾ ಅಧಿಕಾರ ಪತ್ರ (ಪವರ್ ಆಫ್ ಅಟಾರ್ನಿ) ಜಾಲದಿಂದಾಗಿ ಭೂ ಸುಧಾರಣಾ ಕಾಯ್ದೆಯ ಪ್ರಕಾರ ಜಮೀನಿನ ಪರಿಹಾರ ಹಣ ಪಡೆದುಕೊಳ್ಳುವವರಿಗೆ ವಂಚನೆಯಾಗಿದೆಯೆ ;

ಆ) ಹಾಗಿದ್ದಲ್ಲಿ ಅದರ ಸೂತ್ರದಾರರು ಯಾರು ;

ಇ) ಕಂದಾಯ ಇಲಾಖೆಯ ಸಿಬ್ಬಂದಿಯವರು ಅದರಲ್ಲಿ ಶಾಮೀಲಾಗಿದ್ದಾರೆಯೆ ;

ಈ) ಈ ಜಾಲದಿಂದ ಆದ ವಂಚನೆಯ ಹಣವೆಷ್ಟು :

ಉ) ತಪ್ಪಿತಸ್ಥರ ವಿರುದ್ಧ ದಾವೆ ದಾಖಲಾಗಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ ಒಂದು ಪ್ರಕರಣವು ಬೆಳಕಿಗೆ ಬಂದಿದ್ದು, ಮಾಲೀಕರಾದ ಶ್ರೀಯುತ ಸೂರ್ಯ ನಾರಾಯಣ ಅಡಿಗರಿಗೆ ಭೂ ಪರಿಹಾರ ಮೊತ್ತವನ್ನು ಬನ್ನಾಡಿ ಪದ್ಮನಾಭ ಭಟ್ಟರು ಖೋಟಾ ಅಧಿಕಾರ ಪತ್ರದ ಮೂಲಕ ಪಡೆದಿರುತ್ತಾರೆ.